# All India Radio: Bangalore
# National Bulletin In Kannada
**13.12.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**13.12.2025  1.10 p.m.**

**<><><><>**

ಮುಖ್ಯಾಂಶಗಳು

1. ೨೦೦೧ರ ಸಂಸತ್ ಭಯೋತ್ಪಾದನಾ ದಾಳಿಯಲ್ಲಿ ಮೃತಪಟ್ಟ ಭದ್ರತಾ ಸಿಬ್ಬಂದಿಗೆ ಸಂಸತ್ ಭವನದಲ್ಲಿ ಪುಷ್ಪನಮನ; ಗಣ್ಯರಿಂದ ಸ್ಮರಣೆ
2. ಭಾರತದಿಂದ ಪೆರುಗೆ ಎರಡೂವರೆ ಲಕ್ಷ ಸಲೈನ್ ಬಾಟಲಿಗಳು ಸೇರಿದಂತೆ ೨೧ ಟನ್ ಮಾನವೀಯ ನೆರವು ಹಸ್ತಾಂತರ
3. ಉತ್ತರಾಖಂಡದಲ್ಲಿ ಭಾರತೀಯ ಮಿಲಿಟರಿ ಅಕಾಡೆಮಿಯ ನಿರ್ಗಮನ ಪಥಸಂಚಲನ; ೪೯೧ ನೂತನ ಅಧಿಕಾರಿಗಳು ಭಾರತೀಯ ಸೇನೆಗೆ ಸೇರ್ಪಡೆ
4. ಸ್ಕ್ವಾಷ್ ವಿಶ್ವಕಪ್ ಸೆಮಿಫೈನಲ್; ಪ್ರಶಸ್ತಿ ಹಂತಕ್ಕೇರಲು ಪ್ರತ್ಯೇಕ ಪಂದ್ಯಗಳಲ್ಲಿಂದು ಭಾರತ - ಈಜಿಪ್ಟ್ ಮತ್ತು ಚೀನಾ - ಜಪಾನ್ ಹಣಾಹಣಿ

<><><><>

೨೪ ವರ್ಷಗಳ ಹಿಂದೆ ಅಂದರೆ ೨೦೦೧ರ ಇದೇ ದಿನ ನವದೆಹಲಿಯ ಸಂಸತ್ ಭವನದ ಮೇಲೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟ ಭದ್ರತಾ ಸಿಬ್ಬಂದಿ ಮತ್ತು ಸಂತ್ರಸ್ತರನ್ನು ದೇಶ ಇಂದು ಸ್ಮರಿಸುತ್ತಿದೆ.  ದಾಳಿಯಲ್ಲಿ ಮೃತಪಟ್ಟವರಿಗೆ ಸಂಸತ್ ಭವನದ ಆವರಣದಲ್ಲಿಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಲೋಕಸಭಾಧ್ಯಕ್ಷ ಓಂ ಬಿರ್ಲಾ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಪಿಯೂಶ್ ಗೋಯಲ್, ಜಿತೇಂದ್ರ ಸಿಂಗ್, ಕಿರಣ್ ರಿಜಿಜು, ಅರ್ಜುನ್‌ರಾಮ್ ಮೇಘವಾಲ್, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಹಿರಿಯ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಇತರ ಸಂಸತ್ ಸದಸ್ಯರು ಪುಷ್ಪನಮನ ಸಲ್ಲಿಸಿದರು.  ೨೦೦೧ರಲ್ಲಿ ನಡೆದ ಭಯೋತ್ಪಾದಕ ದಾಳಿಯ ವೇಳೆ ಸಂಸತ್ತನ್ನು ರಕ್ಷಿಸುವ ವೇಳೆ ಮಡಿದ ಧೈರ್ಯಶಾಲಿ ಭದ್ರತಾ ಸಿಬ್ಬಂದಿಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿದೇಶಾಂಗ ಸಚಿವ ಎಸ್. ಜೈಶಂಕರ್,

ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ಗೌರವ ನಮನ ಸಲ್ಲಿಸಿದ್ದಾರೆ. ಭಾರತದ ಚೈತನ್ಯಕ್ಕೆ ಮಾರ್ಗದರ್ಶಿಯಾಗಿರುವ ಧೈರ್ಯ, ಶೌರ್ಯ ಮತ್ತು ಸಾಹಸದೊಂದಿಗೆ ಹೋರಾಡಿದ ಭದ್ರತಾ ಸಿಬ್ಬಂದಿಯ ಕರ್ತವ್ಯ ನಿಷ್ಠೆಗೆ ರಾಷ್ಟ್ರ ಇಂದು ನಮನ ಸಲ್ಲಿಸುತ್ತಿದೆ. ಹುತಾತ್ಮರು ಹಾಗೂ ಅವರ ಕುಟುಂಬಗಳಿಗೆ ದೇಶ ಎಂದೆಂದಿಗೂ ಋಣಿಯಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅಮಿತ್ ಶಾ, ಭದ್ರತಾ ಪಡೆಗಳ ಶೌರ್ಯ ಮತ್ತು ಧೈರ್ಯವನ್ನು ಸ್ಮರಿಸಿದ್ದು, ವೀರ ಯೋಧರ ತ್ಯಾಗ ಮತ್ತು ಬಲಿದಾನಕ್ಕೆ ರಾಷ್ಟ್ರವು ಎಂದೂ ಋಣಿಯಾಗಿರುತ್ತದೆ ಎಂದಿದ್ದಾರೆ. ಭದ್ರತಾ ಸಿಬ್ಬಂದಿಯ ಪರಾಕ್ರಮ ಮತ್ತು ಅಚಲ ಕರ್ತವ್ಯ ಪ್ರಜ್ಞೆ, ದೇಶದ ಸಂಕಲ್ಪಕ್ಕೆ ಎಂದಿಗೂ ಪ್ರೇರಣೆಯಾಗಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ಭಯೋತ್ಪಾದನೆಯನ್ನು ಇದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ನಿರ್ಮೂಲನೆ ಮಾಡುವ ರಾಷ್ಟ್ರದ ಸಂಕಲ್ಪವನ್ನು ಭದ್ರತಾ ಸಿಬ್ಬಂದಿಯ ಧೈರ್ಯ ಮತ್ತಷ್ಟು ಬಲಪಡಿಸುತ್ತದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಕರ್ತವ್ಯನಿರತ ಸೈನಿಕರ ತ್ಯಾಗ, ದೇಶದ ಪಾವಿತ್ರ್ಯವನ್ನು ರಕ್ಷಿಸಿದೆ ಮತ್ತು ರಾಷ್ಟ್ರದ ಸಾರ್ವಭೌಮತ್ವವನ್ನು ಎತ್ತಿಹಿಡಿದಿದೆ ಎಂದು ಸಚಿವ ಡಾ. ಎಲ್. ಮುರುಗನ್ ಹೇಳಿದ್ದಾರೆ.

<><><><>

ನಿರ್ಜಲೀಕರಣದಿಂದ ಬಳಲುತ್ತಿರುವ ರೋಗಿಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತ ಪೆರುವಿಗೆ ಎರಡು ಲಕ್ಷದ ೫೦ ಸಾವಿರ ಸಲೈನ್ ಬಾಟಲಿಗಳನ್ನು ಹಸ್ತಾಂತರಿಸಿದೆ. ಆ ಮೂಲಕ ದಕ್ಷಿಣ ಆಫ್ರಿಕಾ ರಾಷ್ಟ್ರದ ವಿಶ್ವಾಸಾರ್ಹ ಅಭಿವೃದ್ಧಿ ಪಾಲುದಾರರಾಗಿ ತನ್ನ ಬದ್ಧತೆಯನ್ನು ಭಾರತ ಪುನರುಚ್ಚರಿಸಿದೆ. ಪೆರುವಿಗೆ ಭಾರತದ ರಾಯಭಾರಿ ವಿಶ್ವಾಸ್ ಸಪ್ಕಲ್ ಪೆರು ಆರೋಗ್ಯ ಸಚಿವಾಲಯಕ್ಕೆ ನೆರವಿನ ವಸ್ತುಗಳನ್ನು ಹಸ್ತಾಂತರಿಸಿದರು. ತನ್ನ ಜಾಗತಿಕ ದಕ್ಷಿಣ ಪಾಲುದಾರರೊಂದಿಗೆ ಒಗ್ಗಟ್ಟಿನ ಒಂದು ಸಂಕೇತವಾಗಿ, ಭಾರತ ಪೆರುವಿಗೆ ೩೨ ಟನ್‌ಗಳಷ್ಟು ಮಾನವೀಯ ನೆರವನ್ನು ಕಳುಹಿಸಿಕೊಟ್ಟಿದೆ. ಭಾರತದ ಈ ಕ್ರಮದ ಕುರಿತು ಪೆರು ನಾಯಕರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಭಾರತ ಮತ್ತು ಪೆರು ಸೌಹಾರ್ದಯುತ ಮತ್ತು ಸ್ನೇಹಪರ ಸಂಬಂಧವಾಗಿದ್ದು, ಆರೋಗ್ಯ ಮತ್ತು ಔಷಧ, ಇಂಧನ ಮತ್ತು ಗಣಿಗಾರಿಕೆ, ಜವಳಿ ಮತ್ತು ಕೃಷಿ,

ತಂತ್ರಜ್ಞಾನ, ರಕ್ಷಣೆ ಮತ್ತು ಬಾಹ್ಯಾಕಾ, ಸಾಮರ್ಥ್ಯವೃದ್ಧಿ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ಆಯಾಮಗಳಲ್ಲಿ ಬಹುಮುಖಿ ದ್ವಿಪಕ್ಷೀಯ ಸಹಕಾರ ಸಂಬಂಧವನ್ನು ಹೊಂದಿದೆ.

<><><><>

ಭಾರತೀಯ ಸೇನೆಗೆ ಇಂದು ೪೯೧ ನೂತನ ಯುವ ಅಧಿಕಾರಿಗಳು ಸೇರ್ಪಡೆಗೊಂಡಿದ್ದಾರೆ. ಉತ್ತರಾಖಂಡದ ಡೆಹ್ರಾಡೂನ್‌ನ ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ವೈಭವೋಪೇತ ನಿರ್ಗಮನ ಪಥಸಂಚಲನ ಆಯೋಜಿಸಲಾಗಿತ್ತು. ಭಾರತೀಯ ಮಿಲಿಟರಿ ಅಕಾಡೆಮಿಯ ಐತಿಹಾಸಿಕ ಚೆಟ್ವೋಡ್ ಕಟ್ಟಡದ ಎದುರು ನಡೆದ ಪಥಸಂಚಲನದಲ್ಲಿ ಒಟ್ಟು ೫೨೫ ಕೆಡೆಟ್‌ಗಳು ಅಂತಿಮ್ ಪಗ್ ಅಂದರೆ ಕೊನೆಯ ಹೆಜ್ಜೆ ಇಡುವ ಮೂಲಕ ಸೇನೆಯ ನಿಯೋಜಿತ ಅಧಿಕಾರಿಗಳಾದರು. ಅವರಲ್ಲಿ ಮಿತ್ರ ರಾಷ್ಟ್ರಗಳ ೩೪ ಕೆಡೆಟ್‌ಗಳೂ ಸೇರಿದ್ದಾರೆ. ಅವರು ಈಗ ತರಬೇತಿ ಪೂರ್ಣಗೊಳಿಸಿದ ನಂತರ ಆಯಾ ರಾಷ್ಟ್ರಗಳ ಸಶಸ್ತ್ರ ಪಡೆಗಳಿಗೆ ಸೇರಿಕೊಳ್ಳಲಿದ್ದಾರೆ. ಸೇನಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಪಥಸಂಚಲನದ ಪರಿಶೀಲನಾ ಅಧಿಕಾರಿಯಾಗಿದ್ದರು.

<><><><>

ಅಂಚೆ ನೌಕರರನ್ನು ಮ್ಯೂಚುವಲ್ ಫಂಡ್ ವಿತರಕರಾಗಿ ತರಬೇತಿ ನೀಡಲು ಮತ್ತು ಪ್ರಮಾಣೀಕರಿಸಲು ಸಂವಹನ ಸಚಿವಾಲಯ ಮತ್ತು ಮುಂಬೈ ಷೇರು ಮಾರುಕಟ್ಟೆ ನಿನ್ನೆ ನವದೆಹಲಿಯಲ್ಲಿ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದವು.

ಆಯ್ದ ಅಂಚೆ ನೌಕರರು, ಹೂಡಿಕೆದಾರರ ಸೇವೆಗಳನ್ನು ಒದಗಿಸುತ್ತಾರೆ ಮತ್ತು ವೇದಿಕೆಯ ಮೂಲಕ ಮ್ಯೂಚುವಲ್ ಫಂಡ್ ವಹಿವಾಟುಗಳನ್ನು ಸುಗಮಗೊಳಿಸುತ್ತಾರೆ. ಆರ್ಥಿಕ ಸೇರ್ಪಡೆಯನ್ನು ಬಲಪಡಿಸುವ ಮತ್ತು ದೇಶಾದ್ಯಂತ ಹೂಡಿಕೆ ಉತ್ಪನ್ನಗಳಿಗೆ ಪ್ರವೇಶವನ್ನು ವಿಸ್ತರಿಸುವತ್ತ ಒಂದು ಪ್ರಮುಖ ಹೆಜ್ಜೆ ಎಂದು ಸಚಿವಾಲಯ ಇದನ್ನು ಶ್ಲಾಘಿಸಿದೆ.

<><><><>

ಕೀನ್ಯಾದ ನೈರೋಬಿಯಲ್ಲಿ ನಿನ್ನೆ ನಡೆದ ವಿಶ್ವಸಂಸ್ಥೆಯ ಪರಿಸರ ಸಭೆಯ ೭ನೇ ಅಧಿವೇಶನದಲ್ಲಿ ಕಾಡ್ಗಿಚ್ಚಿನ ಜಾಗತಿಕ ನಿರ್ವಹಣೆಯನ್ನು ಬಲಪಡಿಸುವ ಕುರಿತು ಭಾರತದ ನಿರ್ಣಯವನ್ನು ಅಂಗೀಕರಿಸಲಾಯಿತು. ಭಾರತ ಮಂಡಿಸಿದ ನಿರ್ಣಯಕ್ಕೆ ಸದಸ್ಯ ರಾಷ್ಟ್ರಗಳಿಂದ ವ್ಯಾಪಕ ಬೆಂಬಲ

ದೊರೆತಿದ್ದು, ವಿಶ್ವಾದ್ಯಂತ ಹೆಚ್ಚುತ್ತಿರುವ ಕಾಡ್ಗಿಚ್ಚಿನ ಬೆದರಿಕೆಯನ್ನು ಪರಿಹರಿಸುವ ತುರ್ತು ಅಗತ್ಯವನ್ನು ಜಾಗತಿಕವಾಗಿ ಗುರುತಿಸಲಾಗಿದೆ ಎಂದು ಪುನರುಚ್ಚರಿಸಲಾಗಿದೆ.

<><><><>

ಫುಟ್ಬಾಲ್ ತಾರೆ ಲಿಯೋನೆಲ್ ಮೆಸ್ಸಿ ತಮ್ಮ ಮೂರು ದಿನಗಳ ಪ್ರವಾಸದ ಭಾಗವಾಗಿ ಇಂದು ಕೋಲ್ಕತ್ತಾಗೆ ಆಗಮಿಸಿದ್ದಾರೆ. ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಕಣ್ತುಂಬಿಕೊಳ್ಳಲು ಮತ್ತು ಸ್ವಾಗತಿಸಲು ಸಾವಿರಾರು ಅಭಿಮಾನಿಗಳು ನೆರೆದಿದ್ದರು. ಅರ್ಜೆಂಟೀನಾ ತಾರಾ ಫುಟ್ಬಾಲ್ ಪಟು ಮೆಸ್ಸಿ ಭಾರತಕ್ಕೆ ೧೪ ವರ್ಷಗಳ ಬಳಿಕ ಆಗಮಿಸುತ್ತಿದ್ದಾರೆ. ತಮ್ಮ ಪ್ರವಾಸದ ವೇಳೆ ಅವರು ಹೈದರಾಬಾದ್, ಮುಂಬೈ ಮತ್ತು ದೆಹಲಿಗೆ ಭೇಟಿ ನೀಡಲಿದ್ದು, ಈ ವೇಳೆ ಸಾರ್ವಜನಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಫುಟ್ಬಾಲ್ ಪ್ರದರ್ಶನಗಳನ್ನು ಆಯೋಜಿಸಲಾಗಿದೆ.

<><><><>

೨೦ ಜನರ ಸಾವಿಗೆ ಮತ್ತು ಸುಮಾರು ಅರ್ಧ ದಶಲಕ್ಷ ಜನರ ಸ್ಥಳಾಂತರಕ್ಕೆ ಕಾರಣವಾದ ಗಡಿ ಘರ್ಷಣೆಗಳ ನಂತರ ಥೈಲ್ಯಾಂಡ್ ಮತ್ತು ಕಾಂಬೋಡಿಯಾ ನಾಯಕರು ಪುನಃ ಕದನ ವಿರಾಮ ಒಪ್ಪಂದವನ್ನು ನವೀಕರಿಸಲು ಒಪ್ಪಿಕೊಂಡಿದ್ದಾರೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ತಮ್ಮ ಮಧ್ಯಸ್ಥಿಕೆ ಹಾಗೂ ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರ ಸಹಕಾರದಿಂದಾಗಿ ಕದನ ವಿರಾಮದ ಈ ಬೆಳವಣಿಗೆ ಸಾಧ್ಯವಾಗಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿಕೊಂಡಿದ್ದಾರೆ.

<><><><>

ಚೆನ್ನೈನಲ್ಲಿಂದು ನಡೆಯಲಿರುವ ಸ್ಕ್ವಾಷ್ ವಿಶ್ವಕಪ್‌ನ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಭಾರತ ತಂಡವು ಹಾಲಿ ಚಾಂಪಿಯನ್ ಈಜಿಪ್ಟ್ ತಂಡವನ್ನು ಎದುರಿಸಲಿದೆ. ಇನ್ನೊಂದು ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಚೀನಾ ತಂಡವು ಜಪಾನ್ ತಂಡವನ್ನು ಎದುರಿಸಲಿದೆ. ಏಳನೇ ಶ್ರೇಯಾಂಕದ ದಕ್ಷಿಣ ಆಫ್ರಿಕಾ ವಿರುದ್ಧ ೩-೦ ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಭಾರತ ಅಂತಿಮ ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟರೆ, ನಿನ್ನೆ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಈಜಿಪ್ಟ್ ಆಸ್ಟ್ರೇಲಿಯಾವನ್ನು ೩-೦ ಅಂತರದಿಂದ ಸೋಲಿಸಿತು. ಸತತ ಎರಡನೇ ಬಾರಿ ಸ್ಕ್ವಾಷ್ ವಿಶ್ವಕಪ್‌ನಲ್ಲಿ ಭಾರತ ಸೆಮಿಫೈನಲ್‌ಗೆ ಅರ್ಹತೆ ಪಡೆದಿದೆ. ಟೂರ್ನಿಯ ಆರಂಭದಲ್ಲಿ, ಭಾರತ, ಸ್ವಿಟ್ಜರ್ಲೆಂಡ್ ಮತ್ತು ಬ್ರೆಜಿಲ್ ತಂಡಗಳನ್ನು ಸೋಲಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿತ್ತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>